**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ., ನ್ಯಾಯಾಲಯ,**
**ತಿ.ನರಸೀಪುರ**

**ಸಿ.ಸಿ.ನಂ.212/2022**

ಪಿರ್ಯಾದುದಾರರು : ಶ್ರೀ. ರವಿ

ವಿರುದ್ಧ

ಆರೋಪಿ : ಶ್ರೀ. ಶಬರೀಶ ಸಿ.ಪಿ.

**ದಂ.ಪ್ರ.ಸಂ.ಕಲಂ.313 ರಡಿಯಲ್ಲಿ ಆರೋಪಿ ಹೇಳಿಕೆ**

ಪ್ರಶ್ನೆಃ 1. ಈ ಪ್ರಕರಣದಲ್ಲಿ ಅಭಿಯೋಜನೆ ಸಾಕ್ಷಿದಾರರ ಸಾಕ್ಷ್ಯವನ್ನು ಕೇಳಿದ್ದೀರಾ?

ಉತ್ತರಃ-

ಪ್ರಶ್ನೆಃ 2. ಫಿರ್ಯಾಸಾ-1, ರವಿ, ಇವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ ಆರೋಪಿಯಾದ ನೀವು ಅವರಿಂದ ರೂ.5,00,000/-ಗಳನ್ನು ನಿಮ್ಮ ತುರ್ತು ಅವಶ್ಯಕತೆಗಾಗಿ ಸಾಲವಾಗಿ ಪಡೆದುಕೊಂಡಿರುವುದಾಗಿ ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳುವಿರಿ ?

ಉತ್ತರಃ-

ಪ್ರಶ್ನೆ 3. ಫಿರ್ಯಾಸಾ-1 ರವರು ಮುಂದುವರೆದು, ತಮ್ಮ ಸಾಕ್ಷ್ಯದಲ್ಲಿ ಆರೋಪಿಯಾದ ನೀವು ಸದರಿ ಸಾಲವನ್ನು ಹಿಂತಿರುಗಿಸುವ ನಿಟ್ಟಿನಲ್ಲಿ ಸದರಿ ಮೊತ್ತಕ್ಕೆ ನಿಪಿ.1 ದಿಃ 27.12.2021 ರ ಕರ್ನಾಟಕ ಗ್ರಾಮೀಣ ಬ್ಯಾಂಕ್, ಸಂತೇಮಾಳ ಶಾಖೆ, ಬನ್ನೂರು ಮೇಲೆ ತೆಗೆಯಲಾದ ಚೆಕ್ ಸಂಖ್ಯೆ 201067 ಗೆ ನಿಪಿ.1(ಎ) ರಂತೆ ಸಹಿ ಮಾಡಿ ಅವರಿಗೆ ನೀಡಿರುವುದಾಗಿ ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳುವಿರಿ ?

ಉತ್ತರಃ-

ಪ್ರಶ್ನೆಃ 4. ಫಿರ್ಯಾಸಾ-1 ರವರು ಮುಂದುವರೆದು, ತಮ್ಮ ಸಾಕ್ಷ್ಯದಲ್ಲಿ ನೀವು ನೀಡಿದ ನಿಪಿ.1 ರ ಚೆಕ್ ಅನ್ನು ನಗದೀಕರಣಕ್ಕೆಂದು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಬನ್ನೂರು ಶಾಖೆ, ಈ ಬ್ಯಾಂಕಿಗೆ ಹಾಕಲಾಗಿ ನಿಪಿ.2 ರಂತೆ FUNDS INSUFFICIENT ಎಂಬ ಹಿಂಬರಹದೊಂದಿಗೆ ದಿಃ 29.12.2021 ರಂದು ಚೆಕ್ ಹಿಂತಿರುಗಿರುವುದಾಗಿ ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳುವಿರಿ ?

ಉತ್ತರಃ-

ಪ್ರಶ್ನೆಃ 5. ಫಿರ್ಯಾದಿ-1 ರವರು ಮುಂದುವರೆದು, ತಮ್ಮ ಸಾಕ್ಷ್ಯದಲ್ಲಿ ಅನಂತರ ನಿಮಗೆ ದಿಃ10.01.2022 ರಂದು ನಿಪಿ.3 ರಂತೆ ನೋಟೀಸು ನೀಡಿದ್ದು, ಸದರಿ ಅಂಚೆ ರಶೀದಿ ನಿಪಿ.4 ಅಗಿದ್ದು, ಅಂಚೆ ಸ್ವೀಕೃತಿ ನಿಪಿ.5 ಆಗಿದ್ದು, ಆಡಿಟರ್ ನೀಡಿರುವ ಪತ್ರದ ದೃಢೀಕೃತ ನಕಲು ನಿಪಿ6 ಆಗಿದ್ದು, ಜಿ.ಎಸ್.ಟಿ. ತೆರಿಗೆಗೆ ಸಂಬಂಧಿಸಿದಂತೆ ದೃಢೀಕೃತ ನಕಲುಗಳು ನಿಪಿ.7 ಮತ್ತು 8 ಆಗಿದ್ದು, ನೀವು ಸಾಲದ ಹಣ ಮರುಪಾವತಿ ಮಾಡಿರುವುದಿಲ್ಲ ಎಂದು ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳುವಿರಿ ?

ಉತ್ತರಃ-

ಪ್ರಶ್ನೆಃ 6. ನಿಮಗೆ ಬೇರೆ ಏನನ್ನಾದರೂ ಹೇಳುವುದು ಇದೆಯೇ ?

ಉತ್ತರಃ-

ಪ್ರಶ್ನೆಃ 7. ನಿಮ್ಮ ಪರ ಸಾಕ್ಷ್ಯ ಇದೆಯೇ ?

ಉತ್ತರಃ-

ಆರೋಪಿಗೆ ತಿಳಿಯುವ ಭಾಷೆಯಲ್ಲಿ ಪ್ರಶ್ನಿಸಿ ನಂತರ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ದಾಖಲು ಮಾಡಲಾಯಿತು.

ದಿಃ 26.12.2022
ಸ್ಥಳ.ತಿ.ನರಸೀಪುರ

ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಲಯ, ಟಿ.ನರಸೀಪುರ.